## ಬಾಲ್ಯದಲ್ಲಿ ಮನೆಯ ವಾತಾವರಣ ಹುಟ್ಟಿದ್ದು, ಓದಿದ್ದು...

ಹುಟ್ಟಿದ್ದು, ಓದಿದ್ದು, ಬೆಳೆದಿದ್ದು ಎಲ್ಲ ಮೈಸೂರಿನಲ್ಲಿ. ಚಿಕ್ಕಂದಿನಲ್ಲಿ ನೋಡಿದ ಚಾಮುಂಡಿ ಬೆಟ್ಟ, ದಸರಾ ಮೆರವಣಿಗೆ, ಅಂಬಾರಿಯೊಳಗೆ ಕೈಮುಗಿದು ಕೂತಿದ್ದ ಮಹಾರಾಜರಿಗೆ ಜನರು ನಮಸ್ಕರಿಸುತ್ತಿದ್ದ ದೃಶ್ಯ, ಕುಕ್ಕರಹಳ್ಳಿ ಕೆರೆ, ಕುವೆಂಪು ಅವರನ್ನು ನೋಡಿದ ನೆನಪು ಹೀಗೆ ಬಹಳಷ್ಟು ಒಳ್ಳೆಯ ನೆನಪುಗಳಿವೆ. ಈಗ ಆ ಊರು ಬಹಳ ಬದಲಾಗಿದೆ. ಕೆಲ ವರ್ಷಗಳ ಹಿಂದೆ ಅಲ್ಲಿಗೆ ಹೋದಾಗ ಆ ಜಾಗ ಎಲ್ಲಿ ಈ ಜಾಗ ಎಲ್ಲಿ ಅಂತ ಹುಡುಕುವಂತಾಗಿತ್ತು.

ಮನೆಯಲ್ಲಿ ಬಹಳ ಸುಸಂಸ್ಕೃತ ವಾತಾವರಣವಿತ್ತು. ಅಜ್ಜ, ಅಜ್ಜಿ, ಅಪ್ಪ, ಅಮ್ಮ ಎಲ್ಲರೂ ನಮ್ಮೆಲ್ಲ ಆಸೆಗಳಿಗೆ ಒತ್ತಾಸೆಯಾಗಿ ನಿಲ್ಲುತ್ತಿದ್ದರು. ನಾವು ಮೂರು ಜನ ಮಕ್ಕಳು. ಇಬ್ಬರು ಅಕ್ಕಂದಿರು ಮತ್ತು ನಾನು. ಮೂವರನ್ನೂ ಓದಿಸಿದರು. ದೊಡ್ಡಕ್ಕ ಬಿ.ಎ., ಎರಡನೆಯವಳು ಸೈಕಾಲಜಿಯಲ್ಲಿ ಆನರ್ಸ್ ಮಾಡಿದಳು. ನಮ್ಮ ಎಲ್ಲ ಕೆಲಸಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. 'ಯಾವತ್ತೋ ಒಂದು ದಿನ ಮದುವೆ ಮಾಡ್ಕೊಂಡು ಹೋಗ್ತಿಯಾ. ಏನು ಓದೋದು ಅಂತೆಲ್ಲ ಅಂದವರಲ್ಲ. ನಮ್ಮ ನಾಳೆಗಳ ಬಗ್ಗೆ ಯೋಚಿಸಿ ಓದಿಗೆ ಪ್ರೋತ್ಸಾಹ ನೀಡಿದ್ದರು. 'ನಿನ್ನ ಮನಸ್ಸಿಗೆ ಒಪ್ಪಿದ್ದನ್ನು ನೀನು ಮಾಡು' ಅಂತ ಹೇಳುತ್ತಿದ್ದರು. ಬಹಳ ಮುಕ್ತ, ಉದಾರ ಮನೋಭಾವದವರು. ಪ್ರೀತಿ, ಸೌಹಾರ್ದತೆ ತುಂಬಿದ ಹಿತವಾದ ವಾತಾವರಣ. ಹಾಗಾಗಿ, ಎಂದೂ ಕೊರತೆಯಾಗಲಿ, ಅಯ್ಯೋ ಅಂದದ್ದಾಗಲಿ ಇಲ್ಲ.

ತಂದೆ ಅಕೌಂಟೆಂಟ್. ಮೈಸೂರಿನಲ್ಲಿ ಆಕಾಶವಾಣಿ ಶುರುವಾದಾಗ ಅದಕ್ಕೆ ಸೂಪರಿಂಟೆಂಡೆಂಟ್ ಆಗಿದ್ದರು. ತಾಯಿ ಗೃಹಿಣಿ. ಆ ಕಾಲಕ್ಕೆ ಲೋಯರ್ ಸೆಕೆಂಡರಿ ಓದಿದ್ದಳು. ಬಹಳ ಜಾಣೆ. ಓದುವುದೆಂದರೆ ಬಹಳ ಇಷ್ಟ. ಪುಸ್ತಕಗಳನ್ನು ಓದಿಯೇ ಹಲವು ವಿಷಯಗಳನ್ನು ತಿಳಿದಿದ್ದಳು. ಮನೆಯಲ್ಲಿ ಸುಮಾರು ಕನ್ನಡ, ಇಂಗ್ಲಿಷ್ ಪುಸ್ತಕಗಳಿದ್ದವು. ಎರಡನ್ನೂ ಓದುತ್ತಿದ್ದಳು. ಶೇಕ್ಸ್‌ಪಿಯರ್‌ನನ್ನು ಕೂಡ ನನಗೆ ಹೇಳಿಕೊಡಬಲ್ಲವಳು. ಅಷ್ಟರಮಟ್ಟಿಗೆ ಜ್ಞಾನ ಸಂಪಾದಿಸಿದ್ದಳು. ರಾತ್ರಿ ಹೊತ್ತು ಮಲಗುವ ಮುನ್ನ ಏನಾದರೂ ಓದಿಯೇ ಮಲಗುವುದು ಅವಳ ಅಭ್ಯಾಸ. ಮನೆಯ ವಾತಾವರಣದಿಂದಲೇ ನನಗೂ ಓದುವ ಹವ್ಯಾಸ ಬೆಳೆಯಿತು. ಐಡಿಯಲ್ ಮದರ್ ಅನ್ನಬಹುದಾಗಿದ್ದ ವ್ಯಕ್ತಿ.

ಧಾರವಾಡದ ಆಕಾಶವಾಣಿಯಲ್ಲಿ ಉದ್ಘೋಷಕಿಯಾಗಿ ಸ್ವಲ್ಪ ದಿನ ಕೆಲಸ ಮಾಡಿದ್ದೆ. ಅದು ನನ್ನ ಮೊದಲ ಕೆಲಸ. ಬಹಳ ಚೆನ್ನಾಗಿತ್ತು. ಈಗ ಟೀವಿ ಬಂದಿದೆ. ಆಗೆಲ್ಲ ರೇಡಿಯೊನೇ ಮುಖ್ಯ ಮಾಧ್ಯಮ. ಇವತ್ತಿಗೂ ರೇಡಿಯೊ ಕೇಳೋದು ಬಹಳ ಇಷ್ಟ.

## ಎಂ.ಎ. ದಿನಗಳ ನೆನಪು

ಬಿ.ಎ. ಓದಿದ್ದು ಮಹಾರಾಣಿ ಕಾಲೇಜಿನಲ್ಲಿ. ಬಿ.ಎ. ಮುಗಿಸಿದ ಮೇಲೆ ಮದುವೆಯಾಯಿತು. ಆಮೇಲೆ ಸ್ವಲ್ಪ ದಿನಗಳ ಅನಂತರ ಇಂಗ್ಲಿಷ್ ಎಂ.ಎ. ಸೇರಿದೆ. ಮಹಾರಾಜ ಕಾಲೇಜಿನಲ್ಲಿ ಓದಿದ್ದು. ಆಗ ಕುವೆಂಪು ಅವರು ಕುಲಪತಿಯಾಗಿದ್ದರು. ನನ್ನ ಆನರ್ಸ್ ಸರ್ಟಿಫಿಕೇಟಿನಲ್ಲಿ ಕುವೆಂಪು ಅವರ ಸಹಿ ಇದೆ. ಕಾಲೇಜಿನಲ್ಲಿ ಬಹಳ ಚೆಂದದ ವಾತಾವರಣ. ಸೈಕಲ್‌ನಲ್ಲಿ ಜುಂ ಅಂತ ಕಾಲೇಜಿಗೆ ಹೋಗುತ್ತಿದ್ದದ್ದು, ಕಾಲೇಜು, ಫ್ರೆಂಡ್ಸ್, ಪಾಠಗಳು ಎಲ್ಲ ಬಹಳ ಎಂಜಾಯ್ ಮಾಡುತ್ತಿದ್ದೆ.

ಇಂಟರ್‌ಮಿಡಿಯೆಟ್‌ನಲ್ಲಿ ವಿಜ್ಞಾನ ತೊಗೊಂಡಿದ್ದೆ. ಆದರೆ, ಯಾಕೋ ಅದರತ್ತ ಒಲವು ಬೆಳೆಯಲಿಲ್ಲ. ಭಾಷೆಯ ಬಗ್ಗೆ ಮೊದಲಿನಿಂದಲೂ ಒಲವಿತ್ತು. ಅದರಲ್ಲೇ ಹೆಚ್ಚು ಅಂಕ ಕೂಡ ತಗೋತಿದ್ದೆ. ಇಂಗ್ಲಿಷ್ ಭಾಷೆ ಕೂಡ ಬಹಳ ಇಷ್ಟವಾಗಿತ್ತು. ಇಂಗ್ಲಿಷ್ ಆನರ್ಸ್ ಮಾಡಿ ಎಂ.ಎ. ಕಡೆ ಹೋದೆ.